**ಕರ್ನಾಟಕಸರ್ಕಾರ**

ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳಕಟ್ಟಡ, ಬೆಂಗಳೂರು-560 001.

ಇ-ಕ್ರಮಾಂಕ: ಇಡಿ/ 79/ಯುಕೆವಿ/2024 ದಿನಾಂಕ:30.01.2025

# <u>ಸಾರ್ವಜನಿಕಪ್ರಕಟಣೆ</u>

## <u>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಕುಲಪತಿ ಹುದ್ದೆಯ ನೇಮಕಾತಿ</u>

<table>
<tr><td>(1)</td><td>ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ಪ್ರಕರಣ 14(2) ರ ಉಪಬಂಧಗಳನುಸಾರ ನೇಮಕಾತಿ ಮಾಡಲು ಈ ಕೆಳಕಂಡ ಅರ್ಹತೆಯುಳ್ಳ ಪ್ರಾಧ್ಯಾಪಕರು/ಶಿಕ್ಷಣತಜ್ಞರುಗಳಿಂದ ಅರ್ಜಿಗಳನ್ನುಆಹ್ವಾನಿಸಲಾಗಿದೆ.<br>
<table>
<tr><td>i.</td><td>ಉನ್ನತಮಟ್ಟದ ಆಡಳಿತ, ಶೈಕ್ಷಣಿಕ ಹಾಗೂ ಸಂಶೋಧನಾ ಸಾಮರ್ಥ್ಯ, ಪ್ರಾಮಾಣಿಕತೆ, ಸಮಗ್ರತೆ/ಋಜುತ್ವ ನೈತಿಕ ಮೌಲ್ಯಗಳನ್ನು ಹಾಗೂ ಸಾಂಸ್ಥಿಕ ಬದ್ಧತೆಯನ್ನು ಹೊಂದಿರತಕ್ಕದ್ದು;</td></tr>
<tr><td>ii</td><td>ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಕನಿಷ್ಠ 10 ವರ್ಷಗಳ ಸೇವೆಸಲ್ಲಿಸಿದ ಅಥವಾ ವಿಖ್ಯಾತ ಸಂಶೋಧನಾ/ ಅಥವಾ ಶೈಕ್ಷಣಿಕ ಆಡಳಿತ ಸಂಸ್ಥೆಗಳಲ್ಲಿ ಕನಿಷ್ಠ 10 ವರ್ಷಗಳು ಕಾರ್ಯನಿರ್ವಹಿಸಿದ ಅನುಭವವನ್ನು ಹಾಗೂ ರುಜುವಾತಾದ ಶೈಕ್ಷಣಿಕ ಅಗ್ರಗಾಮಿತ್ವವನ್ನು ಹೊಂದಿರತಕ್ಕದ್ದು;</td></tr>
<tr><td>iii.</td><td>ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಪ್ರಕರಣ 14(5) ಹಾಗೂ ಪ್ರಕರಣ 14(6) ರಲ್ಲಿ ನಿಯಮಿಸಿರುವಂತೆ, 4 ವರ್ಷಗಳು ಅಥವಾ 67 ವರ್ಷಗಳ ವಯಸ್ಸಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕುಲಾಧಿಪತಿಗಳ ಇಷ್ಟಪರ್ಯಂತ ಪದ ಧಾರಣಾವಧಿಯನ್ನು ಹೊಂದಿರುತ್ತಾರೆ. ಆದುದರಿಂದ ಕುಲಾಧಿಪತಿಗಳ ಇಷ್ಟಪರ್ಯಂತ 4 ವರ್ಷಗಳ ಪದಧಾರಣಾವಧಿಯ ಅವಕಾಶವಿರುವ ವಯೋಮಿತಿಯನ್ನು ಹೊಂದಿರತಕ್ಕದ್ದು.</td></tr>
</table></td></tr>
<tr><td>(2)</td><td>ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯ ನೇಮಕಾತಿಗೆ ಸಲ್ಲಿಸಬಯಸುವ ಆಸಕ್ತರು ತಮ್ಮ ವಿದ್ಯಾರ್ಹತೆ, ಸಂಶೋಧನೆ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಭವಗಳು, ಸಾಧನೆಗಳು ಹಾಗೂ ಇತರೆ ವಿವರಗಳನ್ನು ಯುಜಿಸಿಯಿಂದ ನಿಗದಿಪಡಿಸಲಾಗಿರುವ ನಮೂನೆಯಲ್ಲಿ ಭರ್ತಿ ಮಾಡಿ ಮುದ್ರಿತ ಅರ್ಜಿಗಳನ್ನು ತ್ರಿಪ್ರತಿಗಳಲ್ಲಿ ಈ ನೇಮಕಾತಿ ಜಾಹೀರಾತು ಪ್ರಕಟಣೆಯಾದ 30 ದಿನಗಳ ಒಳಗಾಗಿ (ಸಾರ್ವತ್ರಿಕ ರಜಾದಿನಗಳನ್ನು ಒಳಗೊಂಡಂತೆ) ಸ್ವೀಕೃತವಾಗುವಂತೆ" ಸರ್ಕಾರದಪ್ರಧಾನಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಗೇಟ್ ಸಂಖ್ಯೆ: 03, 6 ನೇ ಮಹಡಿ, ಕೊಠಡಿಸಂಖ್ಯೆ: 601, (ಸ್ವೀಕೃತಿ ಮತ್ತು ರವಾನೆ ಶಾಖೆ) ಬಹುಮಹಡಿಗಳ ಕಟ್ಟಡ, ಬೆಂಗಳೂರು-560001" ಇವರಿಗೆ ಸಲ್ಲಿಸತಕ್ಕದ್ದು.</td></tr>
</table>

| | |
|---|---|
| (3) | ಪಿಡಿಎಫ್ ರೂಪದ ವಿದ್ಯುನ್ಮಾನ ಅರ್ಜಿಗಳನ್ನು ಏಕಪ್ರತಿಯಲ್ಲಿ E-mail: uni2searchcommittee@gmail.comಗೆ ಕಳುಹಿಸತಕ್ಕದ್ದು. |
| (4) | ಪ್ರಸ್ತುತ ಸೇವೆಯಲ್ಲಿರುವ ವ್ಯಕ್ತಿಗಳು ಅವರ ವಿರುದ್ಧ ಇಲಾಖಾ / ಕ್ರಿಮಿನಲ್‌ವಿಚಾರಣೆಗಳು ಬಾಕಿ ಇರದ / ಹೂಡಲು ಉದ್ದೇಶಿಸಿರದ ಮತ್ತು ಈ ಹಿಂದೆ ವಿಚಾರಣೆಗಳನ್ನು ನಡೆಸಿ ದಂಡನೆ ವಿಧಿಸಲಾಗಿರದ ಬಗ್ಗೆ ಹಾಗೂ ಕಳಂಕಿತ ಸೇವಾಚರಿತ್ರೆ ಹಾಗೂ ನೇಮಕಾತಿ ವಿವಾದಗಳನ್ನು ಹೊಂದಿರದ ಬಗ್ಗೆ, ಅವರು ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಿ ಪ್ರಮಾಣ ಪತ್ರಗಳನ್ನು ಹಾಗೂ ಸೇವೆಯಿಂದ ವಯೋನಿವೃತ್ತಿ ಹೊಂದಿರುವವರು ಈ ಕುರಿತಂತೆ ಸ್ವಯಂ ದೃಢೀಕರಣ ಪ್ರಮಾಣಪತ್ರಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಪ್ರಮಾಣ ಪತ್ರಗಳಲ್ಲಿ ತಪ್ಪು ಮಾಹಿತಿ ನೀಡಿರುವುದು ಕಂಡುಬಂದಲ್ಲಿ ಸಂಬಂಧಿಸಿದವರನ್ನು ಕಠಿಣ ಕ್ರಮಕ್ಕೆ ಗುರಿ ಪಡಿಸಲಾಗುವುದು. |
| (5) | ಅರ್ಜಿಸಲ್ಲಿಸಲು ನಿಗದಿಪಡಿಸಲಾಗಿರುವ ನಮೂನೆ /ಪ್ರಪತ್ರವನ್ನು ಉನ್ನತಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ https://hed.karnataka.gov.in ಅಧಿಕೃತ ಜಾಲತಾಣ ಹಾಗೂ ವಿಶ್ವವಿದ್ಯಾಲಯದ ಜಾಲತಾಣದಿಂದ ಪಡೆಯಬಹುದು. |
| (6) | ಅಪೂರ್ಣ ಮತ್ತು ನಿರ್ದಿಷ್ಟ ಪಡಿಸಲಾದ ನಮೂನೆ ಪ್ರಪತ್ರದಲ್ಲಿರದ ಹಾಗೂ ನಿಗದಿತ ಅವಧಿ/ಗಡುವು ಮುಕ್ತಾಯವಾದ ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಂಚೆ ಅಥವಾ ಇತರೆ ಸ್ವರೂಪದ ವಿಳಂಬಗಳಿಗೆ ಉನ್ನತ ಶಿಕ್ಷಣ ಇಲಾಖೆಯು ಜವಾಬ್ದಾರವಾಗುವುದಿಲ್ಲ. |
| (7) | ನೇಮಕಾತಿ ಪ್ರಕ್ರಿಯೆಯಲ್ಲಿ ವಾಮಮಾರ್ಗದ ಮೂಲಕ ಅನುಚಿತ ಪ್ರಭಾವ ಬೀರಲು ಪ್ರಯತ್ನಿಸುವ ವ್ಯಕ್ತಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು. |

ಸಹಿ/-

ಸರ್ಕಾರದ ಪ್ರಧಾನಕಾರ್ಯದರ್ಶಿ,

ಉನ್ನತ ಶಿಕ್ಷಣ ಇಲಾಖೆ.